# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | **339** |
| **ಸದಸ್ಯರ ಹೆಸರು** | : | **ಶ್ರೀ ಎಂ.ನಾಗರಾಜು(ವಿಧಾನಸಭಾ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | : | **10.12.2025** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು** |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಜಾನುವಾರುಗಳ ಉತ್ಪಾದಕತೆಯನ್ನು ಹೆಚ್ಚಿಸುವ ಮತ್ತು ಪಶು ಪ್ರಾಣಿಗಳ ಆರೋಗ್ಯ ರಕ್ಷಣೆ ಸುಧಾರಿಸುವ ನಿಟ್ಟಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಪಶುಸಂಗೋಪನೆ ಇಲಾಖೆಯ ಪ್ರಮುಖ ಸಾಧನೆಗಳು ಯಾವುವು:</td><td>
ಜಾನುವಾರುಗಳ ಉತ್ಪಾದಕತೆಯನ್ನು ಹೆಚ್ಚಿಸುವ ಮತ್ತು ಪಶು ಪ್ರಾಣಿಗಳ ಆರೋಗ್ಯ ರಕ್ಷಣೆ ಸುಧಾರಿಸುವ ನಿಟ್ಟಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಇಲಾಖೆಯು ಕೈಗೊಂಡಿರುವ ಪ್ರಮುಖ ಸಾಧನೆಗಳು.<br><br>
1. ಜಾನುವಾರುಗಳಲ್ಲಿ ಕೃತಕ ಗರ್ಭಧಾರಣೆಗಾಗಿ ಉತ್ಕೃಷ್ಟ ದರ್ಜೆಯ ಘನೀಕೃತ ವೀರ್ಯ ನಳಿಕೆಗಳ ಸರಬರಾಜಿಗಾಗಿ 4 ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳನ್ನು ಮತ್ತು 6 ಘನೀಕೃತ ವೀರ್ಯ ವಿತರಣಾ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. (ವಿವರಗಳನ್ನು <u>ಅನುಬಂಧ-1</u> ರಲ್ಲಿ ನೀಡಲಾಗಿದೆ).<br>
2. ಕಳೆದ 03 ವರ್ಷಗಳಲ್ಲಿ 2023-24, 2024-25 ಹಾಗೂ 2025-26 (Oct-2025 ರವರೆಗೆ) ಒಟ್ಟು 1,87,69,807 ಸಂಖ್ಯೆಯ ಕೃತಕ ಗರ್ಭಧಾರಣೆಯಲ್ಲಿ ಪ್ರಗತಿ ಸಾಧಿಸಲಾಗಿದೆ.(ವಿವರಗಳನ್ನು <u>ಅನುಬಂಧ-1</u> ರಲ್ಲಿ ನೀಡಲಾಗಿದೆ).<br>
3. ಉತ್ಕೃಷ್ಟ ದರ್ಜೆಯ ಮೇವಿನ ಉತ್ಪಾದನೆಗಾಗಿ ರೈತರಿಗೆ ಕಳೆದ 03 ವರ್ಷಗಳಲ್ಲಿ ಒಟ್ಟು 16,77,755 ಸಂಖ್ಯೆಯ ಮೇವಿನ ಬೀಜಗಳ ಕಿರುಪೊಟ್ಟಣಗಳನ್ನು ವಿತರಿಸಲಾಗಿರುತ್ತದೆ. (ವಿವರಗಳನ್ನು <u>ಅನುಬಂಧ-1</u> ರಲ್ಲಿ ನೀಡಲಾಗಿದೆ.)<br>
4. ರಾಜ್ಯದಲ್ಲಿ ಪ್ರತಿ ದಿನಕ್ಕೆ ಹಾಲು ಸಂಗ್ರಹಣೆ ಪ್ರಗತಿ ಸಾಧನೆ ವಿವರ.<br>
<table>
<tr><th>ಕ್ರ.ಸಂ</th><th>ವರ್ಷ</th><th>ಪ್ರತಿ ದಿನ ಸರಾಸರಿ ಹಾಲು ಸಂಗ್ರಹಣೆ (ಲಕ್ಷ ಲೀಟರ್ಸ್ ಗಳಲ್ಲಿ)</th></tr>
<tr><td>1</td><td>2022-23</td><td>80.32</td></tr>
<tr><td>2</td><td>2023-24</td><td>82.92</td></tr>
<tr><td>3</td><td>2024-25</td><td>88.07</td></tr>
<tr><td>4</td><td>2025-26 (ನವೆಂಬರ್ ವರೆಗೆ)</td><td>100.02</td></tr>
</table>
</td></tr>
</table>

5. ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ಯೋಜನೆಯಡಿ ಪ್ರತಿ ಲೀಟರ್ ಹಾಲಿಗೆ ರೂ.5 ರಂತೆ ಕಳೆದ ಮೂರು ವರ್ಷಗಳಲ್ಲಿ ರೂ.4560.00 ಕೋಟಿ ಪ್ರೋತ್ಸಾಹ ಧನವನ್ನು ಪಾವತಿಸಲಾಗಿದೆ. ಮಾಹಿತಿ ಈ ಕೆಳಕಂಡಂತಿದೆ.

| ಕ್ರ.ಸಂ | ಫಲಾನುಭವಿಗಳ ವಿವರ | ಪ್ರತಿ ಮಾಹೆಗೆ ಸರಾಸರಿ ಫಲಾನುಭವಿಗಳ ಸಂಖ್ಯೆ(ಲಕ್ಷಗಳಲ್ಲಿ) |
|---|---|---|
| 1 | ಪುರುಷರು | 4.42 |
| 2 | ಮಹಿಳೆಯರು | 4.49 |
| 3 | ಪರಿಶಿಷ್ಟ ಜಾತಿ | 0.48 |
| 4 | ಪರಿಶಿಷ್ಟ ಪಂಗಡ | 0.33 |
| ಒಟ್ಟು | | **8.90** |

6. ರಾಜ್ಯದಲ್ಲಿ 275 ಸಂಚಾರಿ ಪಶು ಚಿಕಿತ್ಸಾ ಘಟಕಗಳನ್ನು ಸ್ಥಾಪಿಸಲಾಗಿದ್ದು, ಇದುವರೆವಿಗೂ 7.84 ಲಕ್ಷ ಜಾನುವಾರುಗಳಿಗೆ ತುರ್ತು ಚಿಕಿತ್ಸೆ ನೀಡಲಾಗಿದೆ. ಇದರಿಂದ 4.87 ಲಕ್ಷ ರೈತರಿಗೆ ಅನುಕೂಲವಾಗಿದೆ.
7. ಜಾನುವಾರುಗಳ ಚಿಕಿತ್ಸೆಗಾಗಿ ಕಳೆದ ಮೂರು ವರ್ಷಗಳಲ್ಲಿ 110 ನೂತನ ಪಶು ಚಿಕಿತ್ಸಾಲಯಗಳನ್ನು ಸ್ಥಾಪಿಸಲಾಗಿದೆ.
8. ಆರ್.ಐ.ಡಿ.ಎಫ್ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ 371 ಪಶು ಚಿಕಿತ್ಸಾ ಕೇಂದ್ರಗಳಿಗೆ ನೂತನ ಕಟ್ಟಡ ನಿರ್ಮಿಸಲು ಕ್ರಮವಹಿಸಲಾಗಿದೆ.
9. ಜಾನುವಾರುಗಳ ಆಕಸ್ಮಿಕ ಸಾವಿಗೆ ಪರಿಹಾರ ಯೋಜನೆಯಡಿ ಕುರಿ ಮತ್ತು ಮೇಕೆ ಸಾವಿಗೆ ರೂ.58.00 ಕೋಟಿ ಹಾಗೂ ರಾಸುಗಳ ಸಾವಿಗೆ 37.50 ಕೋಟಿ ಪರಿಹಾರ ಧನ ವಿತರಿಸಲಾಗಿದೆ.
10. ತಾಲ್ಲೂಕು ಮಟ್ಟದ ಪಶು ಆಸ್ಪತ್ರೆಗಳನ್ನು ಪಾಲಿಕ್ಲಿನಿಕ್ ದರ್ಜೆಗೆ ಮೇಲ್ದರ್ಜೆಗೇರಿಸಿ ತಜ್ಞ ಪಶುವೈದ್ಯರಿಂದ ಸೇವೆಯನ್ನು ಒದಗಿಸಲಾಗುತ್ತಿದೆ.
11. ಇಲಾಖೆಯಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆಯಲ್ಲಿ 381 ಪಶುವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ.
12. ಗ್ರಾಮೀಣ ಭಾಗದ ಮಹಿಳೆಯರಿಗೆ ರೂ.4.42 ಕೋಟಿ ವೆಚ್ಚದಲ್ಲಿ 3.38 ಲಕ್ಷ ಕೋಳಿಗಳನ್ನು ವಿತರಿಸಲಾಗಿದೆ.
13. ರೈತರಿಗೆ ಆಧುನಿಕ ಪಶುಸಂಗೋಪನಾ ಕುರಿತು ತರಬೇತಿ ನೀಡುವ ಸಲುವಾಗಿ ರಾಜ್ಯದಲ್ಲಿರುವ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪಶುವೈದ್ಯ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.
14. ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿ 8219 ಫಲಾನುಭವಿಗಳಿಗೆ ರೂ.35.96 ಕೋಟಿ ವೆಚ್ಚದಲ್ಲಿ 20+1 ಕುರಿ/ಮೇಕೆ ಘಟಕಗಳನ್ನು ವಿತರಿಸಲಾಗಿದೆ.

| | | |
|---|---|---|
| | | 15. ಕುರಿಗಾಹಿ ಹಾಗೂ ಅವರ ಸ್ವತ್ತುಗಳ ಮೇಲೆ ದೌರ್ಜನ್ಯ ತಡೆಯಲು ಸಾಂಪ್ರದಾಯಿಕ ಕುರಿಗಾಹಿಗಳ ದೌರ್ಜನ್ಯ ಮಸೂದೆ 2024 ನ್ನು ಜಾರಿಗೆ ತಂದು 4914 ಕುರಿಗಾಹಿಗಳಿಗೆ ಗುರುತಿನ ಚೀಟಿಗಳನ್ನು ವಿತರಿಸಲಾಗಿದೆ.<br>16. ರಾಜ್ಯದಲ್ಲಿ ಪಶು ಆಹಾರ ಉತ್ಪಾದನೆ ಮತ್ತು ಗುಣಮಟ್ಟ ನಿಯಂತ್ರಿಸಲು ಕರ್ನಾಟಕ ಪಶು ಆಹಾರ ಅಧಿನಿಯಮ 2025 ನ್ನು ಜಾರಿಗೆ ತರಲಾಗಿದೆ.<br>17. ಅಮೃತ್ ಮಹಲ್ ಮತ್ತು ಹಳ್ಳಿಕಾರ್ ಕರುಗಳನ್ನು ತಳಿ ಅಭಿವೃದ್ಧಿಪಡಿಸಿ ಹರಾಜು ಪ್ರಕ್ರಿಯೆ ಮೂಲಕ ರೂ.1.81 ಕೋಟಿಯಷ್ಟು ಆದಾಯ ಬಂದಿರುತ್ತದೆ. |
| ಆ) | ಅಮೃತ್ ಮಹಲ್ ಮತ್ತು ಹಳ್ಳಿಕಾರ್ ನಂತಹ ಸ್ಥಳೀಯ ದನ ಮತ್ತು ಎಮ್ಮೆ ತಳಿಗಳ ಸಂತಾನೋತ್ಪತ್ತಿ ಮತ್ತು ಸಂರಕ್ಷಣೆಯನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ಅಮೃತ್ ಮಹಲ್ ಮತ್ತು ಹಳ್ಳಿಕಾರ್ ನಂತಹ ಸ್ಥಳೀಯ ದನ ಮತ್ತು ಎಮ್ಮೆ ತಳಿಗಳ ಸಂತಾನೋತ್ಪತ್ತಿ ಮತ್ತು ಸಂರಕ್ಷಣೆಯನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳನ್ನು **<u>ಅನುಬಂಧ-2</u>** ರಲ್ಲಿ ನೀಡಲಾಗಿದೆ.<br>ಮುಂದುವರೆದು, ಪ್ರಸ್ತುತ 2025-26 ನೇ ಸಾಲಿನಲ್ಲಿ ಕಿಲಾರ್ ತಳಿಯ ಅಭಿವೃದ್ಧಿಗಾಗಿ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನಲ್ಲಿ ಕಿಲಾರ್ ತಳಿ ಸಂವರ್ಧನಾ ಕೇಂದ್ರವನ್ನು ನಿರ್ಮಿಸಲಾಗುತ್ತಿದೆ. |
| ಇ) | ರಿಂಡರ್ ಪೆಸ್ಟ್ (Rinderpest) ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಹಾಗೂ ಪ್ರಾಣಿಗಳ ಮತ್ತು ಮನುಷ್ಯರ ಮೇಲೆ ಪರಿಣಾಮ ಬೀರುವ ಪ್ರಾಣಿಜನ್ಯ ರೋಗಗಳನ್ನು (Zoonotic Diseases) ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು: | 1. ರಿಂಡರ್ ಪೆಸ್ಟ್ ರೋಗವು (ದೊಡ್ಡ ರೋಗ) ಜಾನುವಾರುಗಳಿಗೆ ಬರುವ ಸಾಂಕ್ರಾಮಿಕ ರೋಗವಾಗಿದ್ದು, National Project on Rinderpest Eradication (NPRE) ಯೋಜನೆಯನ್ನು ಜುಲೈ 1995 ರಿಂದ ಹಮ್ಮಿಕೊಳ್ಳಲಾಗಿರುತ್ತದೆ. ಲಸಿಕಾ ಕಾರ್ಯಕ್ರಮದ ಫಲಪ್ರದವಾಗಿ ರಾಜ್ಯವನ್ನು ರಿಂಡರ್ ಪೆಸ್ಟ್ ರೋಗ ಮುಕ್ತ ರಾಜ್ಯ ಎಂದು ದಿನಾಂಕ:27-05-2004ರಲ್ಲಿ ಅಂತರಾಷ್ಟ್ರೀಯ Office International des Epizooties (OIE) ರಲ್ಲಿ ಘೋಷಿಸಲಾಗಿದೆ. ತದನಂತರ, ಯಾವುದೇ ರಿಂಡರ್‌ಪೆಸ್ಟ್ ರೋಗ ಪ್ರಕರಣಗಳು ರಾಜ್ಯದಲ್ಲಿ ಕಂಡು ಬಂದಿರುವುದಿಲ್ಲ.<br>2. ಜಾನುವಾರುಗಳ ಆರೋಗ್ಯವನ್ನು ಸಂರಕ್ಷಿಸಿ ಉತ್ಪಾದಕತೆ ಹೆಚ್ಚಿಸಲು ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮದಲ್ಲಿ ರೋಗಗಳಾದ ಕಾಲುಬಾಯಿ ರೋಗ, ಕಂದು ರೋಗ , ಚರ್ಮಗಂಟು ರೋಗ, ಚಪ್ಪೆ ರೋಗ ಹಾಗೂ ಗಳಲೆ ರೋಗ ವಿರುದ್ಧ ಜಾನುವಾರುಗಳಿಗೆ ಕಾಲ ಕಾಲಕ್ಕೆ ಅವಶ್ಯಕ ಲಸಿಕೆಗಳನ್ನು ಹಾಕಲಾಗಿದ್ದು, ಸಾಂಕ್ರಾಮಿಕ ರೋಗಗಳನ್ನು ಹತೋಟಿಯಲ್ಲಿಡಲಾಗಿದೆ.<br>ಕರ್ನಾಟಕ ರಾಜ್ಯವು ದೇಶದಲ್ಲೇ ಮೊದಲ ಬಾರಿಗೆ 8ನೇ ಸುತ್ತಿನ ಕಾಲುಬಾಯಿ ಜ್ವರದ ವಿರುದ್ಧ ಲಸಿಕಾ ಕಾರ್ಯಕ್ರಮವನ್ನು ಸಂಪೂರ್ಣಗೊಳಿಸಿದ್ದು, ರೋಗವು ಹತೋಟಿಯಲ್ಲಿರುವುದನ್ನು ಕೇಂದ್ರ ಸರ್ಕಾರವು ಪ್ರಶಂಷಿಸಿ ಇತರೆ ರಾಜ್ಯಗಳಿಗೆ ನಮ್ಮ ರಾಜ್ಯದ ಮಾದರಿಯನ್ನು ಅಳವಡಿಸಿಕೊಳ್ಳಲು ತಿಳಿಸಿರುತ್ತಾರೆ. |

| | | |
|---|---|---|
| | | 3. ಅದರಂತೆಯೇ ಕುರಿ ಹಾಗೂ ಮೇಕೆಗಳಲ್ಲಿ ಕಂಡುಬರುವ ಗಳಲೆ ರೋಗ, ಕರುಳುಬೇನೆ, ನೀಲಿನಾಲಿಗೆ, ಪಿ.ಪಿ.ಆರ್, ಹಾಗೂ ಕುರಿ ಸಿಡುಬು ರೋಗಗಳಿಗೆ ಲಸಿಕಗಳನ್ನು ಹಾಕಲಾಗುತ್ತಿದ್ದು, ಈ ರೋಗಗಳನ್ನು ತಡೆಗಟ್ಟಲಾಗುತ್ತಿದೆ.<br>4. ಕಳೆದ ಮೂರು ವರ್ಷಗಳಲ್ಲಿ ವಿವಿಧ ಜಾನುವಾರು ರೋಗಗಳ ವಿರುದ್ಧ ಲಸಿಕೆ ಹಾಕಿದ ವಿವರಗಳನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ.<br>5. ಪ್ರಾಣಿ ಜನ್ಯ ರೋಗಗಳಾದ ಕೋಳಿ ಶೀತ ಜ್ವರ, ಗ್ಲ್ಯಾಂಡರ್ಸ್ ಹಾಗೂ ಕಂದು ರೋಗ ತಡೆಗಟ್ಟಲು ಸರ್ವೇಕ್ಷಣಾ ಕಾರ್ಯಕ್ರಮವು ರಾಜ್ಯಾದ್ಯಂತ ನಿರಂತರವಾಗಿ ಜಾರಿಯಲ್ಲಿದೆ.<br>6. ಸದರಿ ಸರ್ವೇಕ್ಷಣಾ ಕಾರ್ಯಕ್ರಮದಲ್ಲಿ ಕೋಳಿ ಶೀತ ಜ್ವರ ಪತ್ತೆಗಾಗಿ ಸೀರಂ, ಕ್ಲೋಯಿಕಲ್ / ಟ್ರೇಕಿಯಲ್, ಪರಿಸರ ಮಾದರಿ, ಗ್ಲ್ಯಾಂಡರ್ಸ್ ರೋಗ ಪತ್ತೆಗಾಗಿ ಸೀರಂ ಮಾದರಿಗಳನ್ನು ಸಂಗ್ರಹಿಸಿ ತಪಾಸಣೆಗಾಗಿ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಬೆಂಗಳೂರು ರವರಿಗೆ ಸಲ್ಲಿಸಲಾಗುತ್ತಿದೆ. ರೋಗ ವರದಿಯಾದಲ್ಲಿ ರೋಗ ಸಂಬಂಧಿತ ನಿಯಂತ್ರಣೆ ಮತ್ತು ಹತೋಟಿ ಕಾರ್ಯಕ್ರಮಗಳನ್ನು ಅನುಸರಿಸಲಾಗುತ್ತದೆ.<br>7. ಕಂದು ರೋಗವನ್ನು ತಡೆಗಟ್ಟಲು 4-8 ತಿಂಗಳ ವಯೋಮಾನದ ಹೆಣ್ಣು ಕರುಗಳಿಗೆ ಜೀವಿತಾವಧಿ ಲಸಿಕೆಯನ್ನು ನೀಡಲಾಗುತ್ತಿದೆ.<br>8. ರೇಬಿಸ್ ರೋಗವನ್ನು ತಡೆಯಲು One Health ಕಾರ್ಯಕ್ರಮದಡಿಯಲ್ಲಿ ಪ್ರತಿ ವರ್ಷ ಸೆಪ್ಟೆಂಬರ್ – ಅಕ್ಟೋಬರ್ ಮಾಹೆಯಲ್ಲಿ ನಾಯಿಗಳಿಗೆ ರೇಬೀಸ್ ಲಸಿಕೆಯನ್ನು ನೀಡಲಾಗುತ್ತಿದೆ.<br>9. ರೇಬೀಸ್ ರೋಗದ ಬಗ್ಗೆ ಶಾಲಾ ಕಾಲೇಜುಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. |
| ಈ) | ಡೈರಿ ಉತ್ಪಾದನೆಯನ್ನು ಹೆಚ್ಚಿಸಲು ಕೃತಕ ಗರ್ಭಧಾರಣೆ, ಗರ್ಭಧಾರಣೆಯ ಪರೀಕ್ಷೆ ಮತ್ತು ಲಸಿಕೆ ಕಾರ್ಯಕ್ರಮಗಳನ್ನು ಸುಗಮಗೊಳಿಸಲು ಯಾವ ಕ್ರಮಗಳನ್ನು ಜಾರಿಗೆ ತರಲಾಗಿದೆ? | 1. ರಾಷ್ಟ್ರೀಯ ಕೃತಕ ಗರ್ಭಧಾರಣೆ ಕಾರ್ಯಕ್ರಮದಡಿಯಲ್ಲಿ ರಾಜ್ಯದ ಶೇ.50 ಕ್ಕಿಂತ ಕಡಿಮೆ ಕೃತಕ ಗರ್ಭಧಾರಣೆ ಪ್ರಗತಿ ಇರುವ 18 ಜಿಲ್ಲೆಗಳಲ್ಲಿ ರೈತರ ಮನೆ ಬಾಗಿಲಿಗೆ ಉಚಿತವಾಗಿ ಕೃತಕ ಗರ್ಭಧಾರಣೆ ಸೇವೆ ಒದಗಿಸುವ ಕಾರ್ಯಕ್ರಮ ಜಾರಿಯಲ್ಲಿರುತ್ತದೆ.<br>2. ರಾಷ್ಟ್ರೀಯ ಗೋಕುಲ್ ಮಿಷನ್ ಯೋಜನೆಯ MAITRI ಕಾರ್ಯಕ್ರಮದಡಿಯಲ್ಲಿ ಗ್ರಾಮೀಣ ನಿರುದ್ಯೋಗಿ ಯುವಕ / ಯುವತಿಯರಿಗೆ ಕೃತಕ ಗರ್ಭಧಾರಣೆ ಮಾಡುವ ತರಬೇತಿಯನ್ನು ನೀಡಲಾಗುತ್ತಿದ್ದು, ಇದರಿಂದ ಗ್ರಾಮೀಣ ಭಾಗದ ರೈತರ ಜಾನುವಾರುಗಳಿಗೆ ಕೃತಕ ಗರ್ಭಧಾರಣೆ ಸೇವೆ ಒದಗಿಸಲು ಅನುಕೂಲವಾಗುತ್ತಿದೆ. ಕಳೆದ 03 ವರ್ಷಗಳಲ್ಲಿ 1415 ಸಂಖ್ಯೆಯ MAITRI ಕಾರ್ಯಕರ್ತರಿಗೆ ತರಬೇತಿ ನೀಡಲಾಗಿರುತ್ತದೆ. |

| | | |
|---|---|---|
| | | 3. ರಾಷ್ಟ್ರೀಯ ಗೋಕುಲ್ ಮಿಷನ್ ಯೋಜನೆಯ ಕಾರ್ಯಕ್ರಮದಡಿಯಲ್ಲಿ HF ಹಾಗೂ Jersey ತಳಿಯ ಲಿಂಗ ನಿರ್ಧಾರಿತ ವೀರ್ಯ ನಳಿಕೆಗಳನ್ನು ರಾಜ್ಯದ ಎಲ್ಲಾ 31 ಜಿಲ್ಲೆಗಳಿಗೆ ವಿತರಣೆ ಮಾಡಲಾಗಿದ್ದು, ಕೃತಕ ಗರ್ಭಧಾರಣೆಯಲ್ಲಿ ಬಳಕೆ ಮಾಡಲಾಗುತ್ತಿದೆ. ಸದರಿ ವೀರ್ಯ ನಳಿಕೆಗಳ ಬಳಕೆಯಿಂದ ಶೇ.90% ಹೆಣ್ಣು ಕರುಗಳ ಜನನ ಸಾಧ್ಯವಿರುತ್ತದೆ.<br><br>4. ಹೈನುಗಾರಿಕೆ ಉತ್ಪಾದನೆ ಹೆಚ್ಚಿಸಲು ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ನಾನು ಸಹ ಚೆನ್ನೈನಲ್ಲಿರುವ NDDB (ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ) ಸಂಸ್ಥೆಯ ವೀರ್ಯ ನಳಿಕೆ ಉತ್ಪಾದನಾ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿ ದೇಶೀಯ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಲಿಂಗ ನಿರ್ಧಾರಿತ ವೀರ್ಯ ನಳಿಕೆಗಳನ್ನು ತಯಾರಿಸುತ್ತಿದ್ದಾರೆ. ಸದರಿ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ನಮ್ಮ ರಾಜ್ಯದಲ್ಲೂ ಸಹ ಲಿಂಗ ನಿರ್ಧಾರಿತ ವೀರ್ಯನಳಿಕೆಯನ್ನು ಉತ್ಪಾದಿಸಲು ತೀರ್ಮಾನಿಸಲಾಗಿದೆ.<br><br>5. ಕರ್ನಾಟಕ ಹಾಲು ಮಹಾಮಂಡಳದ ಮೂಲಕ 2765 ಕೃತಕ ಗರ್ಭಧಾರಣೆ ಕೇಂದ್ರಗಳ ಮುಖಾಂತರ ಕೃತಕ ಗರ್ಭಧಾರಣೆಯನ್ನು ಹೈನು ರಾಸುಗಳಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ:ಪಸಂಮೀ 250 ಸಲೆವಿ 2025**

**(ಕೆ. ವೆಂಕಟೇಶ್)**

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು(ವಿಧಾನಸಭಾ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 339 ಕ್ಕೆ ಅನುಬಂಧ-1**

1.

| ಕ್ರ.ಸಂ | ಘನೀಕೃತ ವೀರ್ಯಉತ್ಪಾದನಾ ಸಂಸ್ಕರಣಾ ಕೇಂದ್ರ. | ಸ್ಥಳ |
|---|---|---|
| 1 | FSS-I ಘನೀಕೃತ ವೀರ್ಯ ಉತ್ಪಾದನಾ ಕೇಂದ್ರ | ಹೆಸರಘಟ್ಟ |
| 2 | FSS-II ರಾಜ್ಯ ವೀರ್ಯ ಸಂಸ್ಕರಣಾ ಕೇಂದ್ರ, | ಹೆಸರಘಟ್ಟ |
| 3 | ಘನೀಕೃತ ವೀರ್ಯ ಉತ್ಪಾದನಾ ಕೇಂದ್ರ,. | ಧಾರವಾಡ |
| 4 | ಘನೀಕೃತ ವೀರ್ಯ ಉತ್ಪಾದನಾ ಕೇಂದ್ರ, | ಮುನಿರಾಬಾದ್ |

| ಕ್ರ.ಸಂ | ಘನೀಕೃತ ವೀರ್ಯ ವಿತರಣಾ ಕೇಂದ್ರ. | ಸ್ಥಳ |
|---|---|---|
| 1 | ಘನೀಕೃತ ವೀರ್ಯ ವಿತರಣಾ ಕೇಂದ್ರ, ಹೆಸರಘಟ್ಟ. | ಹೆಸರಘಟ್ಟ |
| 2 | ಘನೀಕೃತ ವೀರ್ಯ ವಿತರಣಾ ಕೇಂದ್ರ, ಮೈಸೂರು. | ಮೈಸೂರು |
| 3 | ಘನೀಕೃತ ವೀರ್ಯ ವಿತರಣಾ ಕೇಂದ್ರ, ಮಂಗಳೂರು. | ಮಂಗಳೂರು. |
| 4 | ಘನೀಕೃತ ವೀರ್ಯ ವಿತರಣಾ ಕೇಂದ್ರ, ರಾಯಚೂರು. | ರಾಯಚೂರು. |
| 5 | ಘನೀಕೃತ ವೀರ್ಯ ವಿತರಣಾ ಕೇಂದ್ರ, ಧಾರವಾಡ. | ಧಾರವಾಡ. |
| 6 | ಘನೀಕೃತ ವೀರ್ಯ ವಿತರಣಾ ಕೇಂದ್ರ, ಕಲಬುರಗಿ. | ಕಲಬುರಗಿ. |

2. **ಕಳೆದ 03 ವರ್ಷಗಳಲ್ಲಿ 2023-24, 2024-25 ಹಾಗೂ 2025-26 (oct-2025 ರವರೆಗೆ) ಒಟ್ಟು 1,87,69,807ಸಂಖ್ಯೆಯ ಕೃತಕ ಗರ್ಭಧಾರಣೆಗೆ ಕೈಗೊಳ್ಳಲಾಗಿರುತ್ತದೆ.**

| Year | ಒಟ್ಟು | | |
|---|---|---|---|
| | ದನ | ಎಮ್ಮೆ | ಒಟ್ಟು |
| 2023-24 | 6420955 | 979453 | 7400408 |
| 2024-25 | 6346712 | 928582 | 7275294 |
| 2025-26 (Till 31st oct-2025 | 3631594 | 462511 | 4094105 |
| **Total** | **16399261** | **2370546** | **18769807** |

3. **ಉತ್ಕೃಷ್ಟ ದರ್ಜೆಯ ಮೇವಿನ ಉತ್ಪಾದನೆಗಾಗಿ ರೈತರಿಗೆಕಳೆದ 03 ವರ್ಷಗಳಲ್ಲಿ ಒಟ್ಟು 16,77,755 ಸಂಖ್ಯೆಯ ಮೇವಿನ ಬೀಜಗಳ ಕಿರುಪೊಟ್ಟಣಗಳನ್ನು ಉಚಿತವಾಗಿ ವಿತರಿಸಲಾಗಿರುತ್ತದೆ. (ವಿವರ ಈ ಕೆಳಕಂಡಂತಿದೆ.)**

| ವರ್ಷ | ಒಟ್ಟು ವಿತರಿಸಿರುವ ಮಿನಿಕಿಟ್ ಗಳ ಸಂಖ್ಯೆ | ಷರಾ |
|---|---|---|
| 2023-24 | 1356786 | ಒಂದು Hectare ಪ್ರದೇಶದಲ್ಲಿ 5 k.g ಮೇವಿನ ಬೀಜದ 10 ಮಿನಿಕಿಟ್ ಗಳನ್ನು ಬಿತ್ತನೆ ಮಾಡಿದರೆ ಅಂದಾಜು 40 ಟನ್ ಹಸಿರು ಮೇವು ಉತ್ಪಾದನೆಯಾಗುತ್ತದೆ. |
| 2024-25 | 306819 | |
| 2025-26 | 14150 | |
| ಒಟ್ಟು | **1677755** | |

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು(ವಿಧಾನಸಭಾ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 339 ಕ್ಕೆ ಅನುಬಂಧ-2

ಅಮೃತ್ ಮಹಲ್ ಮತ್ತು ಹಳ್ಳಿಕಾರ್ ನಂತಹ ಸ್ಥಳೀಯ ದನ ಮತ್ತು ಎಮ್ಮೆ ತಳಿಗಳ ಸಂತಾನೋತ್ಪತ್ತಿ ಮತ್ತು ಸಂರಕ್ಷಣೆಯನ್ನು ಉತ್ತೇಜಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳ ವಿವರ

| ಕ್ರಮ ಸಂಖ್ಯೆ | ವಿವರ |
|---|---|
| 1 | ಸ್ಥಳೀಯ ದನ ಮತ್ತು ಎಮ್ಮೆ ತಳಿಗಳ ಸಂತಾನೋತ್ಪತ್ತಿ , ಸಂಕ್ಷಣೆ ಮತ್ತು ಅಭಿವೃದ್ಧಿಗಾಗಿ ಒಟ್ಟು 23 ಜಾನುವಾರು ಕ್ಷೇತ್ರಗಳನ್ನು (Farms) ನಿರ್ವಹಣೆ ಮಾಡಲಾಗುತ್ತಿದೆ. |
| 2 | ಹಳ್ಳಿಕಾರ್ , ಅಮೃತ್ ಮಹಲ್, ಮಲೆನಾಡು ಗಿಡ್ಡ, ಖಿಲಾರ್, ಕೃಷ್ಣವ್ಯಾಲಿ ಮುಂತಾದ ಸ್ಥಳೀಯ ದನಗಳ ಹಾಗೂ ಮುರ್ರಾ, ಸೂರ್ತಿ ಎಮ್ಮೆ ತಳಿಗಳ ಉತ್ಕೃಷ್ಟ ತಳಿಗುಣಗಳ ಹೋರಿ /ಕೋಣಗಳನ್ನು ಇಲಾಖೆಯ ಘನೀಕೃತ ವೀರ್ಯ ನಳಿಕೆಗಳ ಉತ್ಪಾದನಾ ಕ್ಷೇತ್ರಗಳಲ್ಲಿ ಘನೀಕೃತ ವೀರ್ಯ ನಳಿಕೆಗಳ ಉತ್ಪಾದನೆಗಾಗಿ ನಿರ್ವಹಿಸಲಾಗುತ್ತಿದ್ದು ಇಲ್ಲಿ ಉತ್ಪಾದಿಸಿದ ಘನೀಕೃತ ವೀರ್ಯ ನಳಿಕೆಗಳನ್ನು ಇಲಾಖೆಯ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಜಾನುವಾರುಗಳ ಕೃತಕ ಗರ್ಭಧಾರಣೆಗಾಗಿ ಬಳಸಲಾಗುತ್ತಿದೆ. |
| 3 | ರಾಜ್ಯದ ಸ್ಥಳೀಯ ದನ ಮತ್ತು ಎಮ್ಮೆ ತಳಿಗಳ ಸಂರಕ್ಷಣೆಮತ್ತು ಸಂವರ್ಧನೆಗಾಗಿ ಪ್ರತ್ಯೇಕ ಜಾನುವಾರು ಮಾತ್ರ ಕ್ಷೇತ್ರಗಳನ್ನು ಸ್ಥಾಪಿಸಿ ನಿರ್ವಹಿಸಲಾಗುತ್ತಿದೆ. ಕ್ಷೇತ್ರದಲ್ಲಿ ಹೆಚ್ಚುವರಿಯಾದ ಗಂಡು ಕರುಗನ್ನು ಆಸಕ್ತ ರೈತರಿಗೆ ಹರಾಜು ಮೂಲಕ ಸಂವರ್ಧನೆಗಾಗಿ ವಿತರಿಸಲಾಗುತ್ತಿದೆ. |
| 4 | ಸ್ಥಳೀಯ ದನ ಮತ್ತು ಎಮ್ಮೆ ಜಾನುವಾರುಗಳ ಸಂರಕ್ಷಣೆಗಾಗಿ ಪಾರಂಪರಿಕವಾಗಿ ಮೀಸಲಿಡಲಾದ ಕಾವಲು ಭೂಮಿಯ ನಿರ್ವಹಣೆ, ಸದರಿ ಕಾವಲುಗಳಲ್ಲಿ ನಿಗದಿತ ತಳಿಯ ರಾಸುಗಳ ಪಾರಂಪರಿಕ ಪದ್ಧತಿಯ ಸಂಗೋಪನೆ ಜೊತೆಗೆ ಕಾವಲು ಭೂಮಿಯನ್ನು ಮೇವಿನ ಬೆಳೆಗಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. |
| 5 | ರಾಜ್ಯದಲ್ಲಿ ಸ್ಥಳೀಯ ಜಾನುವಾರುಗಳ (ದನ ಮತ್ತು ಎಮ್ಮೆ)ಸಾಕಾಣಿಕೆ , ಸಂವರ್ಧನೆ ಮತ್ತು ನಿರ್ವಹಣೆ ಕುರಿತು ರೈತರಿಗೆ ಉಚಿತ ತರಬೇತಿ ಕಾರ್ಯಕ್ರಮಗಳನ್ನು ಇಲಾಖಾ ವತಿಯಿಂದ ಹಮ್ಮಿಕೊಳ್ಳಲಾಗುತ್ತಿದೆ. |
| 6 | ರಾಷ್ಟ್ರೀಯ ಕೃತಕ ಗರ್ಭಧಾರಣೆ ಕಾರ್ಯಕ್ರಮವನ್ನು ರಾಜ್ಯದಕೃತಕ ಗರ್ಭಧಾರಣೆಯಲ್ಲಿ ಶೇ.50% ಕ್ಕಿಂತ ಕಡಿಮೆ ಪ್ರಗತಿ ಇರುವ 18 ಜಿಲ್ಲೆಗಳಲ್ಲಿ (ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬೀದರ್, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಕಲ್ಬುರ್ಗಿ, ಕೊಪ್ಪಳ, ಕೊಡಗು, ಶಿವಮೊಗ್ಗ, ರಾಯಚೂರು, ಉತ್ತರ ಕನ್ನಡ, ವಿಜಯಪುರ,ಯಾದಗಿರಿ ಮತ್ತು ವಿಜಯನಗರ) ಉಚಿತ ಕೃತಕ ಗರ್ಭಧಾರಣೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ ಸ್ಥಳೀಯ ಜಾನುವಾರುಗಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ವಹಿಸಲಾಗುತ್ತಿದೆ. |
| 7 | ಭಾರತ ಸರ್ಕಾರದ ರಾಷ್ಟ್ರೀಯ ಗೋಕುಲ್ ಮಿಷನ್ ಯೋಜನೆಯಡಿ ಮೈತ್ರಿ ಕಾರ್ಯಕರ್ತರಿಗೆ ತರಬೇತಿ ನೀಡಿ ಮನೆ ಬಾಗಿಲಿಗೆ ಕೃತಕ ಕೃತಕ ಗರ್ಭಧಾರಣೆ ಕಾರ್ಯಕ್ರಮವನ್ನು(DOOR STEP AI) ಹಮ್ಮಿಕೊಂಡು ಸ್ಥಳೀಯ ಜಾನುವಾರುಗಳಸಂಖ್ಯೆಯನ್ನುಹೆಚ್ಚಿಸಲು ಕ್ರಮವಹಿಸಲಾಗುತ್ತಿದೆ. |

ಅನುಬಂಧ-3

ಕರ್ನಾಟಕ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ
ವಿವಿಧ ಜಾನುವಾರು ರೋಗಗಳ ವಿರುದ್ಧ ಲಸಿಕೆ ಹಾಕಿರುವ ವಿವರ (ಲಕ್ಷಗಳಲ್ಲಿ)

| ಕ್ರ. ಸಂ | ರೋಗ | 2022-23 | | | 2023-24 | | | 2024-25 | | | ಷರಾ |
|---|---|---|---|---|---|---|---|---|---|---|---|
| | | ಲಭ್ಯವಿದ್ದ ಜಾನುವಾರುಗಳ ಸಂಖ್ಯೆ | ಲಸಿಕೆ ಹಾಕಿದ ಜಾನುವಾರುಗಳ ಸಂಖ್ಯೆ | ಶೇಕಡ | ಲಭ್ಯವಿದ್ದ ಜಾನುವಾರುಗಳ ಸಂಖ್ಯೆ | ಲಸಿಕೆ ಹಾಕಿದ ಜಾನುವಾರುಗಳ ಸಂಖ್ಯೆ | ಶೇಕಡ | ಲಭ್ಯವಿದ್ದ ಜಾನುವಾರುಗಳ ಸಂಖ್ಯೆ | ಲಸಿಕೆ ಹಾಕಿದ ಜಾನುವಾರುಗಳ ಸಂಖ್ಯೆ | ಶೇಕಡ | |
| 1 | ಕಾಲು ಬಾಯಿ ರೋಗ(Foot and Mouth Disease) | 102.85 | 100.70 | 98 | 101.51 | 100.80 | 99 | 200.42 | 197.03 | 98 | 2024-25ನೇ ಸಾಲಿನಲ್ಲಿ 6 ತಿಂಗಳಿಗೆ ಒಮ್ಮೆಯಂತೆ ವರ್ಷದಲ್ಲಿ ಎರಡು ಬಾರಿ ಲಸಿಕೆ ಹಾಕಲಾಗಿದೆ |
| 2 | ಕಂದು ರೋಗ (Brucellosis) | 10.00 | 8.94 | 89 | 10.00 | 9.19 | 92 | 8.35 | 7.89 | 94 | |
| 3 | ಚರ್ಮಗಂಟು ರೋಗ (Lumpy Skin Disease) | 102.85 | 101.12 | 98 | 84.69 | 80.29 | 95 | 84.69 | 104.27 | 100 | 2023-24ನೇ ಸಾಲಿನಿಂದ ಚರ್ಮಗಂಟು ರೋಗದ ಲಸಿಕೆಯನ್ನು ದನಗಳಿಗೆ ಮಾತ್ರ ಹಾಕಲಾಗುತ್ತಿದೆ. |
| 4 | ಚಪ್ಪೆ ರೋಗ (Black Quarter) | | 2.00 | | | 3.32 | | | 1.80 | | |
| 5 | ಗಳಲೆ ರೋಗ (Hemorrhagic Septicemia) | | 104.22 | | | 97.84 | | | 88.30 | | |
| 6 | ನೆರಡಿ ರೋಗ (Anthrax) | | 6.06 | | | 9.00 | | | 6.16 | | ನೆರಡಿ ರೋಗ, ಗಳಲೆ ರೋಗ ಮತ್ತು ಚಪ್ಪೆ ರೋಗಗಳ ವಿರುದ್ಧ ಎಂಡೆಮಿಕ್ ಹಳ್ಳಿಗಳಲ್ಲಿ ಲಸಿಕೆ ಹಾಕಲಾಗುತ್ತದೆ |
| 7 | ಕರುಳು ಬೇನೆ (Enterotoxaemia) | 344.40 | 300.48 | 87 | 344.40 | 315.99 | 92 | 344.40 | 296.19 | 86 | 6 ತಿಂಗಳಿಗೆ ಒಮ್ಮೆಯಂತೆ ವರ್ಷದಲ್ಲಿ 2 ಬಾರಿ ಕರುಳು ಬೇನೆ ಲಸಿಕೆ ಹಾಕಲಾಗುತ್ತಿದೆ. |
| 8 | ಪಿ.ಪಿ.ಆರ್ (Peste des Petits Ruminants) | 172.20 | 100.09 | 58 | 172.20 | 156.69 | 91 | 172.20 | 168.56 | 98 | |
| 9 | ನೀಲಿ ನಾಲಿಗೆ ರೋಗ (Blue Tongue) | | 7.48 | | | 3.00 | | | 21.23 | | ರೋಗೋದ್ರೇಕ ಪ್ರಕರಣಗಳ ಸಂದರ್ಭದಲ್ಲಿ ಕುರಿ & ಮೇಕೆಗಳಿಗೆ ಸುತ್ತು ಲಸಿಕೆ ಹಾಕಲಾಗುತ್ತದೆ. |
| 10 | ಕುರಿ/ ಮೇಕೆ ಸಿಡುಬು (Sheep Pox/ Goat Pox) | | 4.64 | | | 3.99 | | | 1.72 | | |
| 11 | ಹುಚ್ಚು ನಾಯಿ ರೋಗ (Rabies) | 10.00 | 3.68 | 37 | 10.00 | 6.15 | 62 | 10.00 | 8.97 | 90 | |
| 12 | ಹಂದಿ ಜ್ವರ (Classical Swine Fever) | 2.76 | 2.63 | 95 | 2.97 | 2.90 | 98 | 2.97 | 2.68 | 90 | |

ಆಯುಕ್ತರು
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಬೆಂಗಳೂರು